ಸೂಚನೆ ಕೊಟ್ಟು ಲೋಕಲ್ ಆಫೀಸರ್‌ಗಳಿಂದ ವರದಿಯನ್ನು ತರಿಸಿಕೊಂಡು ಯಾರು ಯಾರು ಆರ್ಡರಿನ ವಿರುದ್ಧವಾಗಿ ನಡೆಯುತ್ತಾರೆ ಅಂಥವರಿಗೆ ಶಿಕ್ಷೆ ಕೊಡುವುದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಸಿ. ಎನ್. ಪಾಟೀಲ್.—ಮಾನ್ಯ ಸದಸ್ಯರು ಕೊಟ್ಟಂಥ ಸಲಹೆಯನ್ನು ನಾವು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮವನ್ನು ಚಾಚೂ ತಪ್ಪದೆ ಜಾರಿಯಲ್ಲಿ ತರುತ್ತೇವೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಕೃಷಿಕಾರ್ಮಿಕರಿಗೆ ವೇತನ ಎಷ್ಟು ಕೊಡಬೇಕು ಎಂದು ನಿಗದಿಮಾಡಿದ್ದೀರಿ? ಇದು ಜಾರಿಯಲ್ಲಿದೆಯೋ ಇಲ್ಲವೋ ಎನ್ನುವುದನ್ನು ಆಗಿಂದಾಗ್ಗೆ ಪರಿಶೀಲನೆ ಮಾಡಿದ್ದೀರಿರಾ ? ಇದನ್ನು ಮಾಡುವುದಕ್ಕೆ ರೆವಿನ್ಯೂ ಇನ್‌ಸ್ಪೆಕ್ಟರನ್ನು ನೇಮಿಸಿದ್ದೇವೆಂದು ಹೇಳಿದ್ದೀರಿ ಅವರು ಸರಿಯಾಗಿ ಕೆಲಸ ಮಾಡದೆ ಇರುವುದರಿಂದ ಅದಕ್ಕೆ ಬದಲಾಗಿ ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ ಪ್ರತ್ಯೇಕವಾದ ಸಿಬ್ಬಂದಿಯನ್ನು ನೇಮಿಸಿ ಕೃಷಿಕಾರ್ಮಿಕರಿಗೆ ಸರಿಯಾದ ಕೂಲಿ ಸಿಗುತ್ತಿದೆಯೇ ಇಲ್ಲವೆ ಎನ್ನುವುದನ್ನು ತಿಳಿಯುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಸಿ ಎನ್ ಪಾಟೀಲ್.—ಪನ್ನು ಸ್ಥಿತಿ ಹೀಗೆ ಇದೆ. ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ ಒಟ್ಟು 35 ಎನ್ಯಾಕ್ಟ್‌ಮೆಂಟುಗಳನ್ನು ನಾವು ಹತೋಟಿಯಲ್ಲಿಟ್ಟುಕೊಂಡು ಈ ಕಾರ್ಯವನ್ನು ನಿರ್ವಹಿಸಬೇಕಾಗಿದೆ ನಮ್ಮಲ್ಲಿ ಅಡ್ವಕೇಟ್ ಸ್ಟಾಫ್ ಇಲ್ಲದೇ ಇರುವುದರಿಂದ ಈ ಕಾರ್ಯವನ್ನು ನಿರ್ವಹಿಸುವುದು ಸ್ವಲ್ಪ ಕಷ್ಟವಾಗಿದೆ. ಆದ್ದರಿಂದಲೇ ಈ ತೊಂದರೆ ಪರಿಣಮಿಸಿದೆ. ಈ ಕೆಲಸವನ್ನು ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆ ವಹಿಸಿದೆ ಮೇಲೆ ಅವರಿಗೆ ಡ್ಯೂಯಲ್ ಕಂಟ್ರೋಲ್ ಆಗಿ ಇದನ್ನು ಜಾರಿಗೆ ತರುವುದಕ್ಕೆ ಸ್ವಲ್ಪ ಕೊಂದರೆ ಆಗಿರಬಹುದು ಇದನ್ನು ತಿಳಿದಮೇಲೆ ನಮ್ಮ ಡಿಪಾರ್ಟ್‌ಮೆಂಟಿನಲ್ಲಿಯೇ ಒಂದು ಇನ ಸ್ಪೆಕ್ಟೊರೇಟ್ ಅನ್ನು ಸೆಟ್ ಅಪ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಎರಡನೆಯದಾಗಿ ಇದು ನಾನ್ ಕಾಗ್ನಿಜಬಲ್ ಆಫೆನ್ಸ್ ಆಗಿರುವುದರಿಂದಲೂ ಮತ್ತು ಇದರ ಬಗ್ಗೆ ನಮಗೆ ಫಿರ್ಯಾದಿಗಳು ಬಾರದೆ ಇದ್ದುದರಿಂದಲೂ ಇದರ ಬಗ್ಗೆ ಆಷ್ಟು ಗಮನ ಕೊಡುವುದಕ್ಕಾಗಿಲ್ಲ. ಯಾವ ಕೂಲಿಗಾರನಿಗೆ ನಾವು ವಿಧಿಸಿದಂಥ ಕೂಲಿ ಸರಿಯಾಗಿ ಸಿಕ್ಕುತ್ತಿಲ್ಲ ಎನ್ನುವ ಫಿರ್ಯಾದೆ ನಮಗೆ ಬರುವವರೆಗೆ ನಾವು ಈ ದೆಸೆಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಬಿ ರಾಮಸ್ವಾಮಿ.—ಮಾನ್ಯ ಮಂತ್ರಿಗಳು ಕೂಲಿ ಸರಿಯಾಗಿ ಕೊಡದೆ ಇರುವುದು ನಾನ್‌ಕಾಗ್ನಿಜಬಲ್ ಆಫೆನ್ಸ್ ಎಂದು ಹೇಳಿದ್ದಾರೆ ಇದರ ಬಗ್ಗೆ ಅಧಿಕಾರಿಗಳು ಪರಿಪೂರ್ಣವಾಗಿ ಕೆಲಸ ಮಾಡುತ್ತಿಲ್ಲ. ಎಂದು ಮಾನ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಅಂದರೆ ತಾವೇ ಹೊರಡಿಸಿದಂಥ ಆಜ್ಞೆ ಜಯಪ್ರದವಾಗಿಲ್ಲ ಎಂದು ಹೇಳಿರುವುದು ಮೆಚ್ಚತಕ್ಕದ್ದೆ ? ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಷಯವನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ. ಆಯಾಯ ಇಲಾಖೆಯ ಇನ್‌ಸ್ಪೆಕ್ಟರುಗಳಾಗಲಿ ಅಥವಾ ರೆವಿನ್ಯೂ ಇನ್‌ಸ್ಪೆಕ್ಟರುಗಳಾಗಲಿ ಇದು ನಮಗೆ ಸಂಬಂಧಪಟ್ಟಿಲ್ಲ ಅನ್ನುವ ಉದ್ದೇಶದಿಂದ ಇದನ್ನು ಸಾರ್ವ ಮಾಡುವುದಕ್ಕಾಗಬಲ್ಲಾ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಹೇಳುವುದು ಏನೆಂದರೆ ಗ್ರಾಮಾಂತರ ಪ್ರದೇಶದಲ್ಲಿ ರಕ್ಕಂಧ್ಯಕೃಷಿ ಕಾರ್ಮಿಕರಿಗೆ ಸರಿಯಾಗಿ ಕೂಲಿ ಸಿಗದ ಹಾಗೆಮಾಡಿ ಯಾರು ಈ ಕಾನೂನನ್ನು ಮುರಿಯುತ್ತಾರೊ ಅಥವಾ ಯಾರು ಇವರಿಗೆ ತೊಂದರೆ ಕೊಡುತ್ತಾರೋ ಅಂಥವರ ಮೇಲೆ ಒಂದು ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಸಿ ಎನ್. ಪಾಟೀಲ್.—ಅದನ್ನು ಯೋಚಿಸೋಣ.

Relief measures due to Famine Conditions in Arasikere Taluk

610. SRI ANIVALADA NANJAPPA (Arasikere):—Will the Minister for Revenue be pleased to state —

(*a*) whether it is a fact that the Government has declared Arasikere taluk as scarcity and drought-affected area during 1976-77 after

taking into consideration the high prices and acute scarcity of drinking water for human and cattle consumption due to failure of rabi and khariff corps ;

(*b*) the reasons for not according sanction to the records sent to Government 6 to 7 months back even though the Government had issued an order to waive, postpone, and to stop the loan taken by the ryots from co-operative institutions and Government and to remit the land revenue based on anewari in Arasikere taluk ;

(*c*) whether Government would accord sanction immediately after considering the records sent by the concerned revenue officers regarding writing off the land revenue based on anewari due by the ryots of Arasikere Taluk ?

SRI K. H. PATIL (Minister for Food and Forest) [on behalf of SRI N. HUTCHAMASTY GOWDA (Minister for Revenue)] —

(*a*) Yes.

(*b*) On 2nd June, 1977 the Deputy Commissioner, Hassan has forwarded proposals in respect of 356 villages of Arasikere taluk to the Divisional Commissioner, Mysore regarding remission of Land Revenue. The Divisional Commissinoner after consideration, will forward the same to Government Then the Government will sanction the remission as early as possible.

(*c*) Yes.

ಶ್ರೀ ಅನಿವಾಳದ ನಂಜಪ್ಪ.— ಸ್ವಾಮಿ, ನನ್ನಮೊದಲನೇ ಪ್ರಶ್ನೆಗೆ ನಿಜ ಎಂದು ಒಪ್ಪಿಕೊಂಡಿದ್ದೀರಿ. ಆದರೆ ಅಲ್ಲಿಗೆ ಒದಗಿಸಿರತಕ್ಕಂಥಾ ಪರಿಹಾರ ಮೊಬಲಗು ನೋಡಿದರೆ ಮೊಸಳೆ ಕಣ್ಣೀರು ಸುರಿಸಿದ ರೀತಿಯಿಂತಿದೆ, ನೀವು ಒದಗಿಸಿರುವ ಹಣ ಏನೇನೂ ಸಾಲದು ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ಅರಸೀಕೆರೆ ತಾಲ್ಲೂಕಿನಲ್ಲಿ 7366 ಜನ ಕೃಷಿ ಕಾರ್ಮಿಕರು ಇದ್ದಾರೆ ಇವರಿಗೆ ಕೆಲಸ ಒದಗಿಸಬೇಕಾದರೆ ಒಂದು ತಿಂಗಳಿಗೆ 6 ಲಕ್ಷ 60 ಸಾವಿರ ರೂಪಾಯಿ ಬೇಕಾಗುತ್ತದೆ ಆದರೆ ತಾವು ಒದಗಿಸಿರುವುದು 1 ಲಕ್ಷ 60 ಸಾವಿರ ರೂಪಾಯಿ ಇದು ಏನೇನೂ ಸಾಲದು ಅನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ? ಆದುದರಿಂದ ನಾನು ಕೇಳುವುದು ಏನೆಂದರೆ, ಅವರಿಗೆಲ್ಲರಿಗೂ ಕೆಲಸ ದೊರೆಯುವ ರೀತಿಯಲ್ಲಿ ಒಂದು ತಿಂಗಳಿಗೆ ಸುಮಾರು 7 ಲಕ್ಷ ರೂಪಾಯಿನಂತೆ ಮುಂಜೂರು ಮಾಡಿ ಮುಂದಿನ ಜೂನ್ ತಿಂಗಳವರಗೂ ಅವರಿಗೆ ಕೆಲಸ ಒದಗಿಸುವಂತೆ ಆಶ್ವಾಸನೆ ಕೊಡುತ್ತೀರಾ ?

† ಶ್ರೀ ಕೆ. ಎಚ್. ಪಾಟೀಲ್.—ಆದು ಸ್ಕೇರ್ಸಿಟಿ ಏರಿಯಾ ಅಂತ ಡ್ಲಿಕ್ಲೇರ್ ಆಗಿದೆ. ಆ ಸ್ಕೇರ್ಸಿಟಿ ಏರಿಯಾದಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅವನ್ನೆಲ್ಲಾ ತೆಗೆದುಕೊಳ್ಳುತ್ತೇವೆ. ಇಪ್ಪತ್ತೇ ಅಲ್ಲದೆ ಆ ಏರಿಯಾ ಸ್ಕೇರ್ಸಿಟಿ ಆದ ಮಾತ್ರಕ್ಕೇ ಎಲ್ಲಾ ಕಾಮಗಾರಿಗಳನ್ನೂ ಸರ್ಕಾರವೇ ಮಾಡಬೇಕು ಅಂತ ಏನೂ ಇಲ್ಲ ಉಳಿದ ಕಡೆಗಳಲ್ಲೂ ಎಲ್ಲೆಲ್ಲಿ ಜನಗಳು ಕೆಲಸ ಇಲ್ಲದೇ ನಿರುದ್ಯೋಗಿಗಳಾಗಿದ್ದಾರೋ ಅಂಥಾ ಕಡೆಯೂ ನೋಡಿ ಕೆಲಸ ಮಾಡಬೇಕಾಗಿದೆ. ಆ ರೀತಿಯಾಗಿ ಕೆಲಸ ನಡೆದಿದೆ. ಅಷ್ಟೇ ಅಲ್ಲ, ನಮ್ಮಲ್ಲಿ ಕೆಲಸಕ್ಕೇನೂ ಅಭಾವ ಇಲ್ಲ ಮತ್ತು ಹಣವನ್ನೂ ಸಹ ಇದಕ್ಕೆ ಹೊಸದಾಗಿ ಅಲಾಟ್ ಮಾಡಿದ್ದೇವೆ. ಆದುದರಿಂದ ಸಾಕಷ್ಟು ಜನರಿಗೆ ಕೆಲಸ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಅನಿವಾಳದ ನಂಜಪ್ಪ.—ನಾನು ಕೆಲಸ ಇಲ್ಲದೆ ಇರುವವರಿಗೆ ಕೆಲಸ ಕೊಡಿ ಎಂದು ಕೇಳುತ್ತಾ ಇಲ್ಲ, 7366 ಜನ ಬ್ಯಾಂಡೆಡ್ ಲೇಬರರ್ಸ್ ಏನು ಇದ್ದಾರೆ ಅವರಿಗೆ ಪೂರ್ಣ ಕಾಲದ ಕೆಲಸ ಕೊಡಿ ಎಂದು. ಮತ್ತು ಯಾವುವಾದರೂ ಹಿಂಗಾರು ಬೆಳೆ ಬರಬೇಕಾದರೂ ಕೂಡ ಮುಂದಿನ ಜೂನ್ ತಿಂಗಳಿನಲ್ಲೇ. ಆಲ್ಲಿಯವರೆಗಾದರೂ ಅವರಿಗೆ ಪೂರ್ಣ ಕಾಲದ ಕೆಲಸ ಕೊಡಿ ಮತ್ತು ಇದಕ್ಕೆ ಖರ್ಚಾಗತಕ್ಕಂಥಾದ್ದು ಒಂದು ತಿಂಗಳಿಗೆ 6 ಲಕ್ಷ 60 ಸಾವಿರ ರೂಪಾಯಿ ಆದರೆ ನೀವು ಒಂದೂವರೆ ಲಕ್ಷ ರೂಪಾಯಿ ಕೊಟ್ಟರೆ ಏನೇನೂ ಸಾಕಾಗುವುದಿಲ್ಲ, ಅವರಿಗೆ ಪೂರ್ಣಕಾಲದ ಕೆಲಸ ಒದಗಿಸಿದರೆ ಯಾವರೀತಿಯೂ ತೊಂದರೆಯಾಗುವುದಿಲ್ಲ ಎಂದು ಹೇಳುತ್ತೇನೆ. ಆದುದರಿಂದ ಮಾನ್ಯ ಮಂತ್ರಿಗಳು ಈಗ ಏನು ಉತ್ತರ ಹೇಳಿದರೋ ಅದು ಸತ್ಯಕ್ಕೆ ದೂರವಾದ ಮಾತು ನನ್ನ ಹತ್ತಿರ ಅಂಕಿಅಂಶಗಳು ಇವೆ. ಈಗ ಒದಗಿಸುವ ರೀತಿಯಲ್ಲಿ ಹಣ ಒದಗಿಸಿದರೆ ಆದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಇದನ್ನು ಪುನರ್ ಪರಿಶೀಲನೆ ಮಾಡಿ 7366 ಜನಕ್ಕೂ ಪೂರ್ಣ ಕಾಲದ ಕೆಲಸ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್,—ಮಾನ್ಯ ಸದಸ್ಯರಲ್ಲಿ ನನಗಿಂತಲೂ ಹೆಚ್ಚಿನ ಮಾಹಿತಿ ಇರುವುದರಿಂದ ನಾನು ಅದರ ಬಗ್ಗೆ ಉತ್ತರ ಹೇಳಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಇದನ್ನು ಅಭಾವ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿರುವುದು ಸ್ವಾಗತಾರ್ಹ. ಇಂಥ ಕಡೆಗಳಲ್ಲಿ ಇರತಕ್ಕಂಥಾ ಲ್ಯಾಂಡ್ ರೆವಿನ್ಯೂ ಅನ್ನು ಮನ್ನಾ ಮಾಡಬೇಕು ಎಂದು ಸರ್ಕಾರದ ಆದೇಶ ಇದ್ದರೂ ಕೂಡ ಮತ್ತು ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನು ಆಗಿ ಮಾಡುತ್ತೇವೆ ಎಂದು ಮಾನ್ಯ ಸಹಕಾರ ಮಂತ್ರಿಗಳು ಹೇಳಿದ್ದರೂ ಕೂಡ ಕೆಲವು ರೆವಿನ್ಯೂ ಇನ್‌ಸ್ಪೆಕ್ಟರುಗಳು ಇದನ್ನು ದುರ್ಲಾಭ ಪಡೆದುಕೊಂಡು ಅವರಿಗೆ ಹಿಂಸೆ ಕೊಡುತ್ತಿದ್ದಾರೆ. ಆದುದರಿಂದ ಮಾನ್ಯ ಮಂತ್ರಿಗಳು ಅಭಾವ ಪೀಡಿತ ಪ್ರದೇಶ ಎಲ್ಲೆಲ್ಲ ಇವೆಯೋ ಅಂಥಾ ಕಡೆಗಳಲ್ಲಿ ಲ್ಯಾಂಡ್ ರೆವಿನ್ಯೂ ಆಗಲಿ ಅಥವಾ ಇತರೇ ಸಾಲಗಳನ್ನಾಗಲಿ ವಸೂಲ್ ಮಾಡುವುದಿಲ್ಲ ಅನ್ನುವ ಬಗ್ಗೆ ಆಶ್ವಾಸನೆ ಕೊಡುವರೆ ?

ಶ್ರೀ ಕೆ. ಹೆಚ್. ಪಾಟೀಲ್.— ಇದು ನಂಬಂಧಪಟ್ಟ ತಾಲ್ಲೂಕಿನ ಪ್ರಶ್ನೆ ಆಗಿರುವುದರಿಂದ ಆ ಬಗ್ಗೆ ಇಷ್ಟು ಬಾಕಿ ಬರಬೇಕಾಗಿದೆ ಅನ್ನುವುದನ್ನು ಹೇಳಬೇಕಾದರೆ, ಡ್ರೈ ಏರಿಯಾದ್ದು 1 ಲಕ್ಷ 66,266 ರೂಪಾಯಿ ಮತ್ತು ವೆಟ್‌ಏರಿಯಾದಿಂದ ಒಂದು ಲಕ್ಷ 7 ಸಾವಿರ ಚಿಲ್ಲರೆ ಬರಬೇಕಾಗಿದೆ. ಆದರೆ ಸಂಪೂರ್ಣವಾಗಿ ಅಭಾವ ಪೀಡಿತ ಕ್ಯೊಳಗಾಗಿರುವ ಪ್ರದೇಶದಲ್ಲಿ ಎಷ್ಟೊಷ್ಟು ಲ್ಯಾಂಡ್ ರೆವಿನ್ಯೂ ವೇವ್ ಮಾಡಬೇಕಾಗುತ್ತದೆ ಅನ್ನುವ ಬಗ್ಗೆ ಪ್ರಪೋಸರ್ಸ್ ಸರ್ಕಾರದ ಮುಂದೆ ಇದೆ. ಅದನ್ನು ವಿಚಾರ ಮಾಡುತ್ತೇವೆ.

ಶ್ರೀ ಅನಿವಾಳದ ನಂಜಪ್ಪ — ಅರಸೀಕೆರೆ ತಾಲ್ಲೂಕಿನಲ್ಲಿ ಅಭಾವ ಪೀಡಿತ ಪ್ರದೇಶವಾಗಿರತಕ್ಕಂಥಾದ್ದು 315 ಹಳ್ಳಿಗಳು ಮಾತ್ರ. ಆಲ್ಲಿ ಸುತ್ತಮುತ್ತ ಮಳೆ ಇಲ್ಲ ಬೆಳೆ ಇಲ್ಲ. ಆ ಕಡೆ ಜನ ತುಂಬಾ ತೊಂದರೆಗೊಳಗಾಗಿದ್ದಾರೆ. ಹೀಗಿದ್ದರೂ ಕೂಡ ಇಲಾಖೆಯವರು ಕಂದಾಯ ಮತ್ತು ಸಹಕಾರೀ ಇಲಾಖೆಯವರು ಕೊಟ್ಟಿರತಕ್ಕ ಸಾಲವನ್ನೂ ಸಹ ವಸೂಲ್ಮಾಡುತ್ತಿದ್ದಾರೆ. ಯಾರು ಕೊಡುವುದಕ್ಕೆ ಶಕ್ತಿ ಇದ್ದಾರೋ ಅವರಿಂದ ವಸೂಲ್ಮಾಡಬಹುದು ಎಂದು ಆದೇಶವಿದ್ದರೂ ಸಹ ಆ ಆದೇಶವನ್ನು ದುರುಪಯೋಗಪಡಿಸಿಕೊಂಡು ಜನಗಳಿಗೆ ತುಂಬಾ ತೊಂದರೆಕೊಡುತ್ತ ವಸೂಲ್ಮಾಡುತ್ತಿದ್ದಾರೆ. ಆದುದರಿಂದ ಮಾನ್ಯ ಮಂತ್ರಿಗಳು ಈಗಲಾದರೂ ಅತಿ ಜಾಗ್ರತೆಯಾಗಿ ಈ ದಿವಸವೇ ಅದನ್ನು ತಡೆಹಿಡಿಯುವುದಕ್ಕೆ ಒಂದು ಹುಕುಂ ಕೊಡುತ್ತೀರಾ?

ಶ್ರೀ ಕೆ. ಹೆಚ್ ಪಾಟೀಲ್.—ಈಗಾಗಲೇ ಅದರ ಬಗ್ಗೆ ಒಂದು ಹುಕುಂ ಇರುವುದರಿಂದ ಹೊಸ ದಾಗಿ ಇನ್ನೊಂದು ಹುಕುಂ ಅನ್ನು ಕಳುಹಿಸುವ ಅವಶ್ಯಕತೆ ಇಲ್ಲ ಮತ್ತು ಮಾನ್ಯ ಸದಸ್ಯರು 334 ಹಳ್ಳಿಗಳು ಅಂತ ಹೇಳಿದ್ದಾರೆ ಆದರೆ ಅದಕ್ಕಿಂತಲ್ಲೂ ಜಾಸ್ತಿ ಇದೆ. ಅಲ್ಲಿ 356 ಹಳ್ಳಿಗಳು ಸ್ಕೇರ್ಸಿಟಿ ಏರಿಯಾದಿಂದ ಬಳಲುತ್ತಾ ಇದೆ. ಲ್ಯಾಂಡ್ ರೆವಿನ್ಯೂ ವಸೂಲ್ಮಾಡುವ ಬಗ್ಗೆ ಮತ್ತು ಸರ್ಕಾರಿ ಲೋನ್ ವಸೂಲ್ಮಾಡುವ ಬಗ್ಗೆ ಈಗಾಗಲೆ ಒಂದು ಸರ್ಕುಲರ್‌ನ್ನು ಸರ್ಕಾರ

ಹೊರಡಿಸಿರುವುದರಿಂದ ಯಾರಾದರೂ ಅಧಿಕಾರಿಗಳು ತಪ್ಪು ವರ್ತನೆಯಿಂದ ಕಾನೂನು ವಿರುದ್ಧವಾಗಿ ವರ್ತಿಸಿದರೆ ಆ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೆ ಬರೆದರೆ ಕಾನೂನು ಪ್ರಕಾರ ಉಗ್ರ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಗೋಪಿನಾಥ್ ಸಾಂದ್ರ.—ಮಾನ್ಯ ಅಧ್ಯಕ್ಷರೇ, ಪ್ರಶ್ನೆ ನಂ 531 ಬಹಳ ಮಹತ್ವದ್ದು ಆಗಿರುವುದರಿಂದ ಈ ಪ್ರಶ್ನೆಯನ್ನು ತಾವೇ ಹಾಕಬೇಕೆಂದು ನನ್ನ ವಿನಂತಿ.

SRI K. H. PATIL.—The Hon. Speaker may put the Question No. 531 but not the Member.

MADAM SPEAKER.—Yes, the question No. 531 is put.

Appointment on clerical posts in Karnataka Central Co-operative Bank, Dharwar.

531. SRI K. B. KOLIWAD (Ranibennur).—Will the Minister for Co-operation and Parliamentary Affairs be pleased to state.—

(*a*) whether Government is aware of the appointment made to the clerical posts at the Karnataka Central Co-operative Bank, Dharwar in contravention of relevant rules during the last 2 1/2 years.

(*b*) whether Government is also aware of the termination of services of clerical staff of the Bank in contravention of relevant rules during the same period.

(*c*) if so, the steps taken by Government to prevent such illegal appointments and terminations by the Bank authorities ?

SRI K. H. RANGANATH (Minister for Co-operation and Parliamentary Affairs).—

(*a*) Yes.

(*b*) No.

(*c*) The matter relating to appointments is under examination. Some have approached court. The Bank has flouted rules and the Government instructions—suitable action will be taken after getting the matter examined.

ಶ್ರೀ ಗೋಪಿನಾಥ್ ಸಾಂದ್ರ,—ಈ ಪ್ರಶ್ನೆಯಲ್ಲಿ (ಅ) ಗೆ ಉತ್ತರವಾಗಿ ಬ್ಯಾಂಕಿನವರು ನಿಯಮ ಹಾಗೂ ಸರ್ಕಾರದವರು ನೀಡಿದ ತಿಳುವಳಿಕೆಗಳನ್ನು ತಿರಸ್ಕರಿಸಿದ್ದಾರೆ ಅಂತ ಹೇಳಿದ್ದೀರಿ. ಅದುದರಿಂದ ಅವರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೆ ?

† ಶ್ರೀ ಕೆ. ಹೆಚ್. ರಂಗನಾಥ್.—ನಾನು ಅವರಿಗೆ ಈಗಾಗಲೇ ಹೇಳಿದ್ದೇನೆ. ಬ್ಯಾಂಕಿನವರು ಸುಮಾರು 108 ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದರು. ಅದರಲ್ಲಿ 68 ಜನರನ್ನು ರಿಜಿಸ್ಟ್ರಾರ್‌ರವರ ಅಪ್ಪಣೆ ಪಡೆದು ತೆಗೆದುಕೊಂಡಿದ್ದರು. ಇನ್ನು 40 ಜನರನ್ನು ರಿಜಿಸ್ಟ್ರಾರವರ ಅಪ್ಪಣೆ ಪಡೆಯದೇ ತೆಗೆದುಕೊಂಡಿದ್ದರು. ಅದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಕಳುಹಿಸಿದ್ದೇವೆ. ರಿಪೋರ್ಟ್ ಬಂದ ತಕ್ಷಣ ಅದರ ಬಗ್ಗೆ ವಿಚಾರಣೆ ಮಾಡುತ್ತೇವೆ. ಅವರು ಕಾಯಿದೆ ವಿರುದ್ಧವಾಗಿ